ಮುಟ್ಠಾಳ ಕೆಲಸ ಮಾಡಿಬಿಟ್ಟನೆಂದರೆ ಇದಕ್ಕೆ ಯಾರನ್ನು ಹೊಣೆ ಮಾಡಬೇಕು.

ನಾನು ಹಾಸ್ಟೆಲ್ಲಿಗೆ ಹೊರಡುವ ಹಿಂದಿನ ರಾತ್ರಿ ಉಮ್ಮ ಮಾಡಿದ ರುಚಿಯಾದ ಮೀನು ಸಾರಿನಲ್ಲಿ ಅಮ್ಮ ಮಾಡಿದ ರೊಟ್ಟಿ ಉಂಡು ಬಲು ಭಾರದ ಹೃದಯದೊಂದಿಗೆ ಅಮ್ಮನಲ್ಲಿ ಹೇಳಿದ್ದೆ: ''ಅಮ್ಮ ಏನಾದರೂ ಬೇಕಿದ್ದರೆ ಅಪ್ಪನ್ನ ಕೇಳ್ತೀಯೋ ಇಲ್ಲವೋ ಬಾಪುಟ್ಟಿನ ಕೇಳದೆ ಇರಬೇಡಮ್ಮ'' ಅಂದಿದ್ದೆ. ಆ ಸಮಯದಲ್ಲಿ ಬಾಪುಟ್ಟಿಯೇ ಸ್ವತಃ ಒಂದು ಸಮಸ್ಯೆಯಲ್ಲಿದ್ದ. ಅದು ಉಣ್ಣಿ. ಉಣ್ಣಿ ತಂಗಚ್ಚನ್ ಫ್ರಂ ಕೇರಳ. ಮೊದಲು ಅವನನ್ನು ನಾಯರ್ ಹೋಟೆಲಿನಲ್ಲಿ ನಾನೂ ಬಾಪುಟ್ಟಿಯೂ ಒಟ್ಟಿಗೇ ನೋಡಿದ್ದೆವು. ನಾವು ಅಲ್ಲಿಗೆ ಹೋಗುವ ಮೊದಲೇ ಅವನು ಒಂದು ಕಟ್ಟಂಚಾಯ ಇಟ್ಟುಕೊಂಡು ಅದರಲ್ಲಿ ಬನ್ನು ಅದ್ದಿ ತಿನ್ನುತ್ತ ಕುಳಿತಿದ್ದ. ಅವನನ್ನು ಕಂಡ ಒಡನೇ ಇಬ್ಬರಿಗೂ ಕಸಿವಿಸಿಯಾಗಿತ್ತು. ಅದಕೆ ಮೊದಲನೇ ಕಾರಣ, ಅವನು ನೋಡಿದೊಡನೇ ಕಣ್ಣಿಗೆ ಹಿಡಿಸುವಷ್ಟು ಚೆನ್ನಾಗಿದ್ದ. ಒಳ್ಳೆಯ, ಒಂದಿಷ್ಟೂ ಸುಕ್ಕಾಗದ ಅರಿವೆ ತೊಟ್ಟಿದ್ದ. ಮತ್ತು ಎರಡನೆಯ ಕಾರಣ ಅವನು ಹಾಗೆ ಅಲ್ಲಿ ಟೀ ಕುಡಿಯುತ್ತಿದ್ದರೆ ಪ್ರಭಾ ತನ್ನ ಉದ್ದ ಜಡೆಯನ್ನು ಎದೆ ಮೇಲೆ ಇಳಿಬಿಟ್ಟುಕೊಂಡು ಅಲ್ಲೇ ಗೋಡೆಗೆ ಒರಗಿ ನಿಂತಿದ್ದಳು. ನಮ್ಮನ್ನು ನೋಡಿದ ಒಡನೇ ಅವಳು ಬಾಪುಟ್ಟಿಯೆಡೆಗೆ ಕಣ್ಣು ಹರಿಸಿ ನಾಲಿಗೆ ಕಡಿಯುತ್ತ ಒಳಗೆ ಓಡಿದ್ದಳು. ಅದು ಆ ಹೊತ್ತಿಗೆ ನಮಗೆ ಸಿಕ್ಕಿದ ಸಣ್ಣ ಸಮಾಧಾನವಾಗಿತ್ತು. ನಮ್ಮನ್ನು ನೋಡಿದ ನಾಯರ್ ಕುರ್ಚಿ ಬಿಟ್ಟೇಳದೆ ನಮ್ಮತ್ತ ನೋಡಿ ಕಿರು ನಕ್ಕು, “ವರುಂ ವರುಂ... ಬನ್ನಿ ಬನ್ನಿ” ಅಂದಿದ್ದ. ನಾವು ಹೃದಯದಿಂದ ನಗಲಾರದೇ ಹೋದರೂ ಮುಖದಲ್ಲಿ ನಗು ತಂದುಕೊಂಡು ಅವನತ್ತ ನೋಡಿದ್ದೆವು. ಅವನು ನನಗಿಂತ ಬಾಪುಟ್ಟಿಗಿಂತಲೂ ವಯಸ್ಸಿನಲ್ಲಿ ದೊಡ್ಡವನಿದ್ದ. ಎದ್ದು ನಿಂತರೆ ನಮಗಿಂತ ಎತ್ತರ, ನಮಗಿಂತ ಚೆಂದ. ಇವನ ಪಕ್ಕ ಪ್ರಭಾ ನಿಂತರೆ ಸರಿಯಾಗಿ ಅವನ ಭುಜಕ್ಕೆ ಬರುತ್ತಾಳೆ. ನನ್ನ ಮನಸ್ಸು ಒಡನೇ ಲೆಕ್ಕ ಹಾಕಿತ್ತು. ಆದರೆ ಅವನು ಇಂಥ ಯಾವುದನ್ನೂ ಲೆಕ್ಕ ಹಾಕಿಲ್ಲವೆಂಬ ನಿಷ್ಕಲ್ಮಶ ನಗುವಿನೊಂದಿಗೆ ಕೈಚಾಚಿ ಮುಂದೆ ಬರುತ್ತ ನ್ಞಾನ್ ಉಣ್ಣಿ, ಉಣ್ಣಿ ತಂಗಚ್ಚನ್ ಫ್ರಂ ಕೇರಳ ಅಂದಿದ್ದ. ಅದು ನಮ್ಮ ಬದುಕಿನ ಮುಖ್ಯ ತಿರುವಿನ ಆರಂಭದ ಕಲ್ಲಾಗಿತ್ತು. ನನ್ನನ್ನು ಹಾಸ್ಟೆಲ್ಲಿಗೆ ಕಳಿಸಲು ಅಷ್ಟೊಂದು ಮುತುವರ್ಜಿ ವಹಿಸಿ ಓಡಾಡುತ್ತಿರುವಾಗಲೂ ಅವನು ಅಂತರಾಳದಲ್ಲಿ ಖಿನ್ನನಾಗೇ ಇರುತ್ತಿರುವುದು ನನಗೆ ಗೊತ್ತಾಗುತ್ತಿತ್ತು. ನಾನು ಕೇಳಿದರೆ ನೀನು ಸ್ವಲ್ಪ ಕಾಲ ಹಾಸ್ಟೆಲ್ಲಿಗೆ ಹೋಗ್ತೀಯಲ್ಲ, ಬಿಟ್ಟು ಇರಬೇಕಲ್ಲ ಅಂತ ಬೇಸರ ಅಷ್ಟೇ ಅಂದು ಮಾತು ಹಾರಿಸಿದ್ದ. ಅದಷ್ಟೇ ಅವನ ಬೇಸರಕೆ ಕಾರಣವಲ್ಲ ಎನ್ನುವುದು ಅವನು ಹೇಳದೆಯೇ ನನಗೆ ಗೊತ್ತಾಗುತ್ತಿತ್ತು. ಯಾಕೆಂದರೆ ಅವನಂತೇ ನಾನೂ ಬೇಸರದಲ್ಲಿದ್ದೆ. ಮಾತ್ರವಲ್ಲ, ಈಗ ಹೋಗುವ ಈ ಪ್ರಯಾಣದೊಂದಿಗೆ ಇನ್ನು ಮುಂದಿನ ಪ್ರಯಾಣವೆಲ್ಲ ಊರನ್ನು ಬಿಟ್ಟು ಬೇರೆಲ್ಲೋ ಹೋಗುವುದೇ ಆಗಿರುತ್ತದೆಯೆಂದು ನನಗೆ ಯಾವತ್ತೋ ಗೊತ್ತಾಗಿತ್ತು. ಅಷ್ಟಾದರೂ ನನ್ನೊಳಗೆ ಅದನ್ನೂ ದಾಟಿ ಉಗುರಿನೊಳಿಗೆ ನೆಟ್ಟ ಮುಳ್ಳಿನಂಥ ನೋವೊಂದು ಹೊರಳುತ್ತಲೇ ಇತ್ತು. ಅದು ಬೇಶಕ್ ಬಾಪುಟ್ಟಿಯ ಕುರಿತಾಗಿತ್ತು. ಉಣ್ಣಿ ಬಂದ ಮೇಲೆ ಬಾಪುಟ್ಟಿಯ ಮನಸಿನಲ್ಲೂ ಅಂಥದ್ದೇ ಮುಳ್ಳಾಡಿಸಿದ ನೋವೊಂದು ಕಾಡುತ್ತಿರುವುದು ನನಗೆ ಸ್ಪಷ್ಟವಾಗಿತ್ತು. ಅದನ್ನು ಅವನು ನಿರಾಕರಿಸುತ್ತಲೇ ಬಂದಿದ್ದ, ನಾನು ಹಾಸ್ಟೆಲ್ ಸೇರುವವರೆಗೂ.

ನಾನು ಹಾಸ್ಟೆಲ್ ಸೇರಿದ ಮೇಲೆ ನಮ್ಮ ಊರಿನ ನೆನಪು, ಮನೆಯ ನೆನಪು, ಅಮ್ಮನ ನೆನಪು, ಮಾಡುಹೊಳೆಯ ನೆನಪು ಮುಖ್ಯವಾಗಿ ಬಾಪುಟ್ಟಿಯ ನೆನಪು ತುಂಬ ಕಾಡಿತ್ತು. ಬದುಕಿನ ಪುಟಗಳಿಗೆ ಹೊಸಬಣ್ಣ ಸುರಿಯತೊಡಗಿತ್ತು. ನಿಧಾನಕ್ಕೆ ನಮ್ಮೂರಿನ ನೆರಳು ಸರಿಯುತ್ತ, ಹೊಸ ಹೊಸ ಚಿಂತನೆಗಳು ತಲೆದೋರತೊಡಗಿದ್ದವು. ಹಾಗೆಂದು ನಾನು ನಮ್ಮೂರನ್ನೋ, ಬಾಪುಟ್ಟಿಯನ್ನೋ